ಒಂದಾಣೆ ಮಾಲೆ 338

ಕಸ್ತೂರಿ ಮಿಶ್ರಣ

(ರೆಡಿಯೋ ಪ್ರಹಸನ)

ರಚಯಿತ:

ವಿದ್ವಾನ್ ಡಿ. ಮಹಾಲಿಂಗ ಭಟ್ಟ,

ಕನ್ನಡಪಂಡಿತ, ಬೋರ್ಡು ಹೈಸ್ಕೂಲು, ಸಿಂಗನಲ್ಲೂರು.

(ಕೊಳ್ಳೇಗಾಲ)

1962

ಬೆಲೆ: ೧ ಆಣೆ.

ಒಂದಾಣೆ ಮಾಲೆ — ಮಂಗಳೂರು.

“ಒಂದಾಣೆ ಮಾಲೆ”ಯಲ್ಲಿ

ಈ ವರೆಗೆ ಪ್ರಕಟವಾಗಿರುವ ಏಕಾಂಕ ನಾಟಕಗಳು

1 ಸಾರೀಶ್ವರರು
2 ಸದ್ರಿ ಸುಬ್ಬ
3 ಚುನಾವಣೆ ಅಥವ ಬನಾವಣೆ
4 ವೆಂಕಟನ ಸಂಕಟ
5 ಬಾಬಿಗೆ ಬಾಸಿಂಗ
6 ಸತ್ಯವಂತ ಬಾಬಿ
7 ಮರ್ಜಿ
8 ಸತೀ ಸಾವಿತ್ರಿ
9 ಅಕಾಂಡ ತಾಂಡವ
10 ವೀರಾ ಬಾಯಿ
11 ಚುಟ್ಟ ಬಿಟ್ಟ ದಿಟ್ಟ
12 ಶಿಶುಪಾಲ ಮಾನಭಂಗ
13 ಜರಾಸಂಧ ವಧೆ
14 ಸತ್ಯ ಹರಿಶ್ಚಂದ್ರ
15 ಮಾಯಾಮೃಗ
16 ಸತೀ ವೃಂದಾ
17 ಗೌತಮನ ಗೃಹತ್ಯಾಗ ಮತ್ತು ಸಿದ್ಧಾರ್ಥನ ಕಾರುಣ್ಯ
18 ಪುನರುಜ್ಜೀವನ
19 ಸ್ವಾತಂತ್ರ್ಯ
20 ಭಕ್ತ ಕುಚೇಲ
21 ಮದ್ಯೆ ಅವಾಂತರ
22 ಗ್ರಾಮ ಸ್ವಾತಂತ್ರ್ಯ
23 ಭಕ್ತ ಧ್ರುವ
24 ಬೇಡನ ಮಗಳು
25 ಪುರಂದರದಾಸರು
26 ವೀರಾಗ್ರಣಿ ಕರ್ಣ
27 ಕುಶ-ಲವ
28 ಅಕ್ಷಯ ಪಾತ್ರೆ
29 ವೈರಾಗ್ಯ ನಿಧಿ
30 ಭರತನ ಬಂಧುಪ್ರೇಮ
31 ಮಹಾತ್ಮಾ ಉದಂಕ
32 ಭಕ್ತ ಪ್ರಹ್ಲಾದ
33 ಅಭಿಮನ್ಯು
34 ವಿಷ ಬೀಜ
35 ಬಲಿ ಬಂಧನ
36 ವೀರಜನನಿ (ಗೀತಾ ನಾಟಕ)
37 ಶಕುಂತಲಾ
38 ರುಕ್ಮಾಂಗದ
39 ಸತ್ಯಭಾಮಾ ಗರ್ವಭಂಗ
40 ಶರಸೇತು
41 ದೀಪಾವಳಿ
42 ಶಂಭುಕ ವಧೆ
43 ರಾಜಾ ಭರ್ತೃಹರಿ
44 ಶರಶಯ್ಯೆ
45 ಕನಕದಾಸರು
46 ರಾಮರಾಜ್ಯದ ಮಡಿವಾಳ
47 ಭಸ್ಮಾಸುರ ಮೋಹಿನಿ
48 ಗೋಪಾಲನ ಸ್ವಾಮ್ಯ
49 ನರವೀರ ನೃಪತುಂಗ
50 ಮಾಯಾವಿನಿ
51 ಧರ್ಮಸಂಕಟ ಅಥವ ಕರ್ಣ
52 ಅಹಲ್ಯೋದ್ಧಾರ
53 ಸಲೀಮಾ

[ಹೊದಿಕೆಯ 3ನೇ ಪುಟಕ್ಕೆ ಮುಂದುವರಿದಿದೆ]

ಕಸ್ತೂರಿ ಮಿಶ್ರಣ

(ರೇಡಿಯೋ ಪ್ರಹಸನ)

....

ಪಾತ್ರಗಳು:—

1. ವಸಂತ—ಸ್ಕೂಲ್ ಮೇಷ್ಟ್ರು. ಪ್ರಾಯ 24 ವರ್ಷ.
2. ಶಕುಂತಲಾ—ಆತನ ಹೆಂಡತಿ. ಪ್ರಾಯ 20 ವರ್ಷ.
3. ಬಸಮ್ಮ—ಹಾಲಿನ ಮುದುಕಿ.
4. ಶಾಂತಲೆ }
5. ಶ್ಯಾಮಲೆ } —ಶಕುಂತಲೆಯ ನೆರೆಮನೆಯ ಓರಗಿತ್ತಿಯರು.

ದೃಶ್ಯ ೧

[ಹಳ್ಳಿಯೊಂದರ ಬೀದಿಯ ವಾತಾವರಣವನ್ನೊದಗಿಸುವ ವಾದ್ಯಾಲಾಪನೆ. ಅಸ್ಪಷ್ಟದಿಂದ ಸ್ಪಷ್ಟಕ್ಕೇರುವ ಕಾಲುಹೆಜ್ಜೆಯ ದನಿ.)

ಬಸಮ್ಮ: (ತೆರೆಯ ಮುಂದೆ ಬಂದು) ಅವ್ವಾ! ಅವ್ವಾ!

ಶಕುಂತಲೆ: (ಮೌನ)

ಬಸಮ್ಮ: ಅವ್ವಾ! ಓ, ಶಕುಂತವ್ವಾ! ಒಳಗಿದ್ದೀರೇನ್ರವ್ವಾ?

ಶಕುಂ: ಓಹ! ಇದ್ದೀನಿ. ಯಾರು?

ಬಸಮ್ಮ: ನಾನು ಕಣ್ರವ್ವಾ! ಬಸಮ್ಮ! ಹಾಲು ಹಾಕಿಸ್ಕೊಳ್ಳಿ ಅಂತ.

ಶಕುಂ: ಸರೀ ಕಣಮ್ಮಾ, ಬಂದೆ (ಬಾಗಿಲು ತೆರೆಯುವ ಸದ್ದು)

ಬಸಮ್ಮ: (ಶಕುಂತಲೆಯ ಕಳೆಗುಂದಿದ ಮೈಕಟ್ಟು ನೋಡಿ) ಅಯ್ಯೋ! ಶಿವನೆ! ಇದ್ಯಾಕವ್ವಾ ಹಿಂಗೆ ಕಂಗೆಟ್ಟಿದೀರಿ? ಹುಷಾರಿಲ್ಲೇನವ್ವಾ?

ಶಕುಂ: ಏನೂ ಇಲ್ಲ; ಚೆನ್ನಾಗಿದ್ದೀನಿ. ಏನೋ ನಿನ್ನೆಯಿಂದ ಕೊಂಚ ತಲೇ ಸಿಳೀತಾ ಇತ್ತು. ಅದಕ್ಕೆ......

ಬಸಮ್ಮ: (ಹಾಲು ಬಗ್ಗಿಸಿ) ಬರೀ ತಲೆಸಿಳಿತಾ ಅಂದ್ರು, ಮೈಯಲ್ಲಿ ಎಷ್ಟು ಕೆಟ್ಹೋಗಿದ್ದೀರವ್ವಾ! ಅಲ್ಲಾ, ಅದೂ ಸರಿಯೇ ಅನ್ನಿ. ಪಾಪ! ಹಾಲು ಹೈನ ತಿಂದು ಬಾಳೋವ್ರು! ಹೂವ್ನಂತೆ ಹಗುರಾಗಿರ್ಬೇಕು. ಪಾಪ! ಅಯ್ನೋರಂತ್ರ ಏನಾದರೂ ಮದ್ದುಗಿದ್ದು ತರ್ಸಿ ಕುಡೀರವ್ವಾ!

ಶಕುಂ; ಹೂಂ, ಅದಕ್ಕೇ ಅವರು ಬೆಳಗಾಗೆದ್ದು ಶೀಶೆ ತಗೊಂಡು ಹೋಗಿದ್ದಾರೆ. ಇನ್ನೇನು? ಈಗ ಬಂದ್ಬಿಡ್ತಾರೆ.

ಬಸಮ್ಮ: ಹಾಗೇ ಮಾಡಿ, ತಾಯಿ! ಅದೋ ಅಯ್ನೋರು ವಸಂತ ಪ್ನೋರು ಬರ್ತಾ ಅವ್ರೆ. ನಾ ಬರ್ತೀನಿ ಕಣ್ರವ್ವಾ! (ಹೋಗುವಳು)

ಶಕುಂ: ಆಗಲಿ. ಹೋಗಮ್ಮಾ.

ವಸಂತ: (ಪ್ರವೇಶಿಸುತ್ತ) ಸಕ್ಕೂ! ಸಕ್ಕೂ! ಈಗ ಹೇಗಿದ್ದಿಯಾ?

ಶಕುಂ: (ಮೌನ).

ವಸಂತ: ನಿನ್ನಾ ಕಣೇ, ಕೇಳ್ತಾ ಇರೋದು. ಅಲ್ಲ, ಈಗ ಹೇಗಿದ್ದೀಯಾಂತ.

ಶಕುಂ: ಹಾಗೇನೆ ಇದ್ದೇನೆ. ಇನ್ ಹ್ಯಾಗಿರೋದೂಂದ್ರೆ........ (ಮುನಿಸು)

ವಸಂತ: ಅದು ಸರೀ. ಇದ್ಯಾಕೆ ಈ ಮುನಿಸು? ಇಲ್ನೋಡು— ಡಾಕ್ಟ್ರು ಈ ಮಿಕ್ಸ್‌ಚರ್ ಕೊಟ್ಟಿದ್ದಾರೆ. ಇದನ್ನು ಚೆನ್ನಾಗಿ ಅಲ್ಲಾಡಿಸಿ ಒಂದೌನ್ಸಿನಂತೆ ದಿನಕ್ಕೆ ಮೂರು ಸಲ ಕುಡೀಬೇಕಂತೆ. ಆ ಮೇಲೆ....

ಶಕುಂ: (ಸಿಟ್ಟಾಗಿ) ಆ ಮೇಲೇನು ಡಾಕ್ಟ್ರ ತಲೆ. ಅಲ್ಲಾಂದ್ರೆ, ನಿಮಗೂನೂ ಅಷ್ಟು ತಿಳಿಯದೇ ಹೋಯ್ತಲ್ಲಾ! ನನಗೆ ಈ ಕರೀ ಮಿಕ್ಸ್‌ಚರ್ ಕಂಡರೇನೇ ಎಲ್ಲಿಲ್ಲದ ತಲೆನೋವು ಬರುತ್ತೆ. ಆ ಕೆಂಪು ಮಿಕ್ಸ್‌ಚರ್ ತಗೊಂಬಂದಿದ್ರೆ???

ವಸಂತ: ಇದೂನೂ ಕಸ್ತೂರಿಮಿಶ್ರಣಾ ಕಣೇ! ಕಸ್ತೂರಿ ಕಪ್ಪಲ್ವೇ? ಅಲ್ಲನ್ನು; ಆ ಕೆಂಪು ಮಿಶ್ರಣ ತಗೊಂಬಂದಿದ್ರೇನೋ ಚೆನ್ನಾಗಿತ್ತು ಅನ್ನು.

ಅದರಕ್ಕಿಂತಲೂ ನಿನಗೆ ಅತ್ಯಂತ ಪ್ರಿಯವಾದ ಶಾವಿಗೆ ಪಾಯಸಾನ ತಂದಿದ್ರೆ ಇನ್ನೂ ಚೆನ್ನಾಗಿತ್ತೇನೋ?

ಶಕುಂ: ಹ ಹ್ಹ ಹ್ಹ! ತಲೆನೋಯುತ್ತಿದ್ರೆ ಯಾರಾದ್ರೂ ಶಾವಿಗೆ ಪಾಯಸಾನ ಔಷಧಿ ಅಂತ ಕುಡೀತಾರೆಯೇ? ಸರಿಹೋಯಿತು.

ವಸಂತ: ಅಲ್ಲದೆ ಉಂಟೆ? ಆ ಮೇಲೆ ನೀನೇ ಹೇಳುತ್ತಾ ಇದೀಯಾ —ಆ ಕೆಂಪು ಮಿಕ್ಸ್‌ಚರ್ ತರ್ಬೇಕಿತ್ತೂಂತ. ಅದಕ್ಕೇ ನಾನಂದೆ— ಅದರಲ್ಲೇನಾಯ್ತು?

ಶಕುಂ: ಏನೂ ಇಲ್ಲ. ಇದನ್ನು ಕುಡಿಯೋ ಹಿಂಸೇನೂ ತಪ್ಪಿದ್ದಲ್ಲ. ಹೂಂ ಪ್ರತೀ ಸಲ ಒಂದೌನ್ಸು. ಆ ಮೇಲೆ?

ವಸಂತ: ಆ ಮೇಲೆ ಅರ್ಧಗಂಟೆ ಆಗುತ್ತಲೂ ಬಿಸಿನೀರಿನಲ್ಲಿ ಒಂದೊಂದು ಮಾತ್ರೆ, ಅಷ್ಟೆ.

ಶಕುಂ: ಅಷ್ಟೇ ತಾನೆ? ಹೂಂ.

ವಸಂತ: ಅಯ್ಯೋ, ನೀನೇನೋ ಇಷ್ಟು ಸುಲಭವಾಗಿ ಅಂದು ಬಿಡುತ್ತೀಯಾ? ಆದರೆ ಆ ಡಾಕ್ಟ್ರು ಅಷ್ಟು ಕೊಡ್ಬೇಕಾದ್ರೇನೇ ನನ್ನ ಎಷ್ಟು ಪಟ್ಟಾಡಿಸಿದ್ರೂಂತ ತಿಳ್ಕೊಂಡೆ?

ಶಕುಂ: ಪಟ್ಟಾಟವಂತೆ, ಪಟ್ಟಾಟ! ಏನು ಹೈಜಂಪ್ ಮಾಡೀ— ಅಂದ್ರೆ? ಇಲ್ಲ. ಕುದುರೇ ಸವಾರಿ ಮಾಡೀ—ಅಂದ್ರೆ?

ವಸಂತ: ಊಹೂಂ. ಮೊತ್ತಮೊದಲು ನನ್ನ ಪ್ರಾಯವೆಷ್ಟೂಂತ ಕೇಳಿದ್ರು. ಇಪ್ಪತ್ತನಾಲ್ಕು ಅಂದೆ.

ಶಕುಂ: (ರಾಗವಾಗಿ) ನಿಮಗೇ ತಲೆಸಿಡಿತ ಅಂತ ತಿಳ್ಕೊಂಡ್ರೇನೋ, ಪಾಪ!

ವಸಂತ: ಇಲ್ಲ, ಇಲ್ಲ. ನಿನಗೇಯೆ. ಆ ಮೇಲೆ ನಿನ್ನ ಹೆಸರು, ಪ್ರಾಯ, ವಿದ್ಯಾಭ್ಯಾಸ ಅಂತ ಎಲ್ಲಾನೂ ಕೇಳಿದ್ರು. ಖಾನೇಶುಮಾರಿ ಲೆಕ್ಕ ತೆಗೆಯೋಕೆ ಬಂದವರ ಹತ್ರ ಹೇಳುವಂತೆ ಎಲ್ಲವನ್ನೂ ಓದಿದೆ. ಆದರೆ, ನೀನು ಹುಟ್ಟಿದ ಇಸವೀನೇ ಜ್ಞಾಪಕಕ್ಕೆ ಬರದೇ ಹೋಯ್ತು ನೋಡು. ಕೊನೆಗಂತೂ ಒಂದು ಅಂದಾಜು ಮಾಡಿ ಹೇಳಿದೆ.

ಶಕುಂ: ಹೂಂ. ನಿಮಗೆಲ್ಲ ಜ್ಞಾಪಕವಿರುತ್ತೆ, ಹೇಳಿ. ಮೋಸು

ಮರೆತ ಹಾಗೇ, ಅಂತ ಗಾದೇನೇ ಇದೆಯಲ್ಲ. ನೀವೂನೂ ಮೇಷ್ಟ್ರೇ ಆಗಿರೋವಾಗ.......

ವಸಂತ: ಅಂತೂ ಕೊನೆಗೂ ಸುಮಾರು ಇಪ್ಪತ್ತು ಅಂತ ಅಂದಾಜು ಮಾಡಿ ಹೇಳಿದೆ.

ಶಕುಂ: ಅಯ್ಯಯ್ಯೋ! ನನಗಿನ್ನೂ ಹದಿನೆಂಟು ಅಂದ್ರೆ! (ಸ್ವರ ಬದಲಿಸಿ) ಹೂಂ ಸದ್ಯ ಇಪ್ಪತ್ತು ಅಂದಿರಲ್ಲ! ಅಲ್ಲ, ಅದೂ ಮರೆವಿನಲ್ಲಿ ಇಪ್ಪತ್ತಾರೋ ಮೂವತ್ತೋ ಅಂದಿಲ್ವಲ್ಲ? ಏನು ಮರೆವೂಂದ್ರೆ? ದಿನಾ, ಮರೆವು, ಮರೆವು, ಮರೆವು!

ವಸಂತ: (ನಗುತ್ತ) ಅಲ್ಲಇ. ನೀ ಹುಟ್ಟಿದಾಗ ನಿಮ್ಮ ಮನೆಯಲ್ಲಿ ನಾನಿದ್ದೆನೇನು? ನಂಗೇನು ಗೊತ್ತು?

ಶಕುಂ: ನನ್ನ ಜಾತಕ ಇಲ್ವೇ, ಅಂದ್ರೆ!

ವಸಂತ: ಹೂಂ. ಇನ್ನೀಗ ಜಾತಕಾನೂ ಬೇಕಿಲ್ಲಾ ಅನ್ನು. ಏಕೆಂದರೆ ನೀನೆ ಹೇಳಿದೆಯಲ್ಲ ಹದಿನೆಂಟು ಅಂತ. ಹುಂ (ನಗುತ್ತ) ಆ ಮೇಲೆ ಡಾಕ್ಟ್ರು ಮತ್ತೊಂದು ಪ್ರಶ್ನೆ ಕೇಳಿ ಈ ಔಷಧಿ ಕೊಟ್ರು.

ಶಕುಂ. (ತಾನೂ ಮುಗುಳ್ನಗುತ್ತ) ಹೆಂಡ್ತಿ ಗಿಡ್ಡವೋ ಉದ್ದವೋ ಅಂತ ಕೇಳಿದ್ರೇನೋ?

ವಸಂತ: (ತಲೆ ಅಲ್ಲಾಡಿಸುತ್ತ) ಊಹೂಂ.

ಶಕುಂ: ಇನ್ನೇನು? ಮೈಬಣ್ಣಾನೇ?

ವಸಂತ: ಊಹುಂ. ಅದೂ ಅಲ್ಲ.

ಶಕುಂ: ಇನ್ನೇನು? ಹೇಳೀ ಅಂದ್ರೆ.

ವಸಂತ: ನನ್ನ, ನಿನ್ನ ಮದುವೆ ಆಗಿ ಎಷ್ಟು ವರ್ಷ ಆಯ್ತು ಅಂತ.

ಶಕುಂ: ಕೆಲಸವಿಲ್ಲ. ಮದುವೇ ಕಟ್ಟಿಕೊಂಡು ಅವರಿಗೇನಂತೆ? ತಲೆನೋವಿಗೂ (ಒತ್ತಿ) ಅದೂ ಈ ಕರೀ ಮಿಕ್ಸ್ಚರ್ ಕೊಡೋಕೆ, ಇಷ್ಟೆಲ್ಲಾ ಕೇಳಬೇಕೆ?

ವಸಂತ: ಕೇಳದೆ ಮತ್ತೆ? ಕೊನೆಯೊಳಗೆ ಹಾಗೂ ಹೀಗೂ ಲೆಕ್ಕ ಹಾಕಿ....ಕಳೆದ ತಿಂಗಳು ನಾನು ಸ್ಕೂಲಿಗೆ ಮೂರುದಿನ ರಜೆ ಬರೆದು

ಮನೆಯಲ್ಲೇ ಇದ್ದು ಅಡುಗೆಮಾಡುತ್ತಿದ್ದುದು ಯಾವಾಗ? ಅಂದ್ರು. ಆ ಮೇಲೆ?

ಶಕುಂ: ಆ ಮೇಲೆ?

ವಸಂತ: ಆ ಮೇಲೆ ತಾನೇ ನಿನಗೆ—"ತಲೆನೋವಿನ ಜೊತೆಗೆ ವಾಂತೀಗೀಂತಿ ಅಂತ ಏನಾದ್ರೂ ಇದ್ದೆಯೋ?" ಅಂತ ಕೇಳಿದ್ರು.

ಶಕುಂ: ಇದೆಯಲ್ಲಾ! ಹೇಳಿದ್ವೀರ್ರೋ ಇಲ್ಲ ಅದೂ ಇಲ್ವೋ? ಏಕೆಂದ್ರೆ ನಿಮ್ಗ್ ಮರೆವು!

ವಸಂತ: ತತ್‌ಕ್ಷಣ ಇದೆ ಅಂದ್ಬಿಟ್ಟೆನಲ್ಲಾ! ಆ ಮೇಲೆ ಅವರೂನೂ ಏನೂ ಗಾಬರಿ ಇಲ್ಲಾ ಅಂದ್ರು. (ಸಾಭಿಪ್ರಾಯವಾಗಿ) ಇನ್ನು ಎಂಟೊಂಭತ್ತು ತಿಂಗಳು! ಸಕ್ರ್ಯ! ಇಲ್ನೋಡು. ನೀನು ಆ ಹಾಳು ಮೂಳು ಕಸೂತಿ ಹಾಕೋದಕ್ಕಿಂತ ಇನ್ನು ಮುಂದೆ ಒಂದು ಚಿಕ್ಕ ಕುಲಾವಿ ಹಾಕಿಟ್ಟರೆ ತುಂಬ ಚೆನ್ನಾಗಿರುತ್ತೆ.... ಅಂತ ನನ್ನ.... ಅ.... ಅ....

ಶಕುಂ: (ನಾಚುತ್ತ) ಸಾಕು, ಸುಮ್ಮನಿರೀಂದ್ರೆ. ಕಂಡವರು ನಕ್ಕಾರು.

ವಸಂತ: ನಗಲೀ, ನಗಲೀ. ನಕ್ಕಷ್ಟು ಆರೋಗ್ಯಕ್ಕೊಳ್ಳೆಯದಲ್ಲವೇ? ನೀನೂನೂ ನಗುನಗುತ್ತಲೇ ಇರು. (ಗೋಡೆ ಗಡಿಯಾರ ಒಂಭತ್ತು ಗಂಟೆ ಬಾರಿಸುವುದು). ಸರಿ. ಅದೋ ನೋಡು. ಅದಕ್ಕೆ ಸರಿಯಾಗಿಯೂ ಗಂಟೆ ಬಾರಿಸಿತು.

ಶಕುಂ: ಹುಂ. ಹರಟೆ ಕೊಚ್ಚುತ್ತಾನೇ ಗಂಟೆ ಒಂಬತ್ತಾಯಿತು ಈಗಲಾದರೂ ಸ್ಕೂಲಿಗೆ ಹೊರಡಿ ಸದ್ಯ. (ನಗುವಳು)

ವಸಂತ: ಹೂಂ, ನೀನೂ ಹೊರಡು ಮತ್ತೆ ಔಷಧಿ ಕುಡಿಯೋದಕ್ಕೆ. ಎಲ್ಲಿ? (ಕೈಹಿಡಿಯುವನು).

ಶಕುಂ: ಕೈ ಬಿಡೀಂದ್ರೆ? ನಡೀರಿ ಸುಮ್ನೆ. ಹಾಗೇ ನಡೆಯೋ ಕಾಗೋಲ್ವೆ? ನಾನೇನೂ ಮುದುಕಿಯಲ್ಲ. (ಬಿಯ್ಯಾರದಿಂದ ಹೊರಡುವಳು.)

ವಸಂತ: ಅಲ್ಲ, ಖಂಡಿತವಾಗಿಯೂ ಅಲ್ಲ. ಏಕೆಂದರೆ, ಮುದುಕಿಯಾಗಿದ್ದರೆ ಈ ಕಸ್ತೂರಿಮಿಶ್ರಣಾನೇ ಬೇಕಿರಲಿಲ್ಲಾ.... ಹಹ್ಹ ಹ್ಹ!

(ತೆರೆ)

ದೃಶ್ಯ ೨

ಶಕುಂತಲಾ: (ಕಿಡಕಿನಲ್ಲಿ) ಆಗಲೇ ಐದು ಗಂಟೆಯಾದ್ರೂ ಇನ್ನೂ ಸ್ಕೂಲಿಗೆ ಹೋದೋರು ಬಂದೇ ಇಲ್ಲ. ನಮ್ಮ ಇವರಿಗೆ—ವರ್ಷದ ಮುನ್ನೂರ ಅರುವತ್ತೈದು ದಿನವೂ ಒಂದೇ. ಮನೆಯಲ್ಲಿ ಹುಶಾರಿದ್ದರೂ ಸರಿ; ಇಲ್ಲದಿದ್ದರೂ ಸರಿ. ಏನೇ ಆಗಿದ್ರೂ ತಾವು ಮಾತ್ರ ಬೇಗನೆ ಮನೆಗೆ ಬರೋ ಕ್ರಮಾನೇ ಇಟ್ಕೊಂಡಿಲ್ಲ. ಅಲ್ಲ, ಈವತ್ತಾದ್ರೂ ನಾಲ್ಕೂವರೆಗೇ ಮನೆಗೆ ಬರ್ತಾರೇಂತ ಆಗ್ಲೇ ಕಾಫೀನೂ ಮಾಡಿಟ್ಟೆ. ಆರುತ್ತಾ ಇದೆ. (ಹೊರಗೆ ಸೈಕಲ್ಲಿನ ಗಂಟೆ ಕೇಳಿಸುವುದು) ಹುಂ. ಬಂದರೂ ಅಂತ ಕಾಣುತ್ತೆ. (ಬಾಗಿಲು ತೆರೆಯುವಳು) ಇದ್ಯಾಕೇಂದ್ರೆ ಇಷ್ಟೊತ್ತು? ನಾನಿಲ್ಲಿ ಪ್ರಾಣಬಿಟ್ಟರೂ ನೀವೇನೂ ಬೇಗ ಬರೋಹಾಗಿಲ್ಲ. (ವಸಂತನ ಕೈಯನ್ನೆತ್ತಿ ತನ್ನ ಮುಖಮುಚ್ಚಿಕೊಂಡು ಅಳುವಳು.)

ವಸಂತ: ಅಯ್ಯಯ್ಯೋ, ಶಿವನೆ! ಇದೇನು ಶಕ್ಕೂ? (ಯೋಚಿಸಿ) ಊಂ ಔಷಧಿ ಹಿಡಿಸಲಿಲ್ವೆ? ನಡೆ, ಈಗಲೇ ಡಾಕ್ಟ್ರನ್ನ ನೋಡಿಕೊಂಡು ಬರೋಣ. (ಕೈಹಿಡಿದು ಬಲವಂತಪಡಿಸುವನು.)

ಶಕುಂ: ಅಲ್ಲಾಂದ್ರೆ; ಅಲ್ಲಿ ನೋಡಿ. ಕಾಫಿ ಅರ್ಧಗಂಟೆಯಿಂದಲೂ ಆರುತ್ತಾ ಕೂತಿದೆ.

ವಸಂತ: ಇಷ್ಟೇ ತಾನೇ? ಅಲ್ಲ, ಕಾಫಿ ಆರುತ್ತೇಂತ ಯಾರಾದರೂ ಅಳುತ್ತಾರೇನೇ ಶಕ್ಕೂ? ಎಷ್ಟು ಸಲೀಸಾಗಿ ಅಳುತ್ತೀಯಾ! ಹಾಗಿದ್ರೆ, ನೀನೂ ಒಬ್ಬ ಹೆಂಗಸುಽ ಅನ್ನು.

ಶಕುಂ: (ತಡೆಯಲಾರದೆ ನಕ್ಕು) ಹಹ್ಹಹ್ಹ! ಇಲ್ಲ, ಈ ದಿನ ನೀವು ಹಸೆಮಣೆ ಮೇಲೆ ಕೂತು, ಗಂಡು ಗಂಡುಸನ್ನೇ ಮದುವೆಮಾಡಿಕೊಂಡಿರೇನು? ಹಹ್ಹಹ್ಹ! ಚೆನ್ನಾಗಿದೆ!

ವಸಂತ: ಇಲ್ಲ, ಇಲ್ಲ ಆ ದಿನ ಹೆಂಗುಸನ್ನು ಮದುವೆಮಾಡಿಕೊಂಡೆ. ಈಗ ಗಂಡಾಯ್ತು.

ಶಕುಂ: ಈಗ? (ಗಾಬರಿಯಿಂದ ತನ್ನನ್ನು ನೋಡಿಕೊಂಡು ಮತ್ತೆ) ಈಗ ಅದೇನು ಬಂತಪ್ಪಾ ಗ್ರಹಚಾರ!

ವಸಂತ: ಈಗಲ್ಲಽಽ. ಇನ್ನು ಒಂಬತ್ತು ತಿಂಗಳಿಗೆ ಗಂಡಾಗುತ್ತೆ.

ಅಂತ ಅಲ್ವೆ? ಇದರಲ್ಲಿ ನಿನ್ನ ಅಭಿಪ್ರಾಯವೇನು? ಹೇಳು. ಎಲ್ಲಿ? ತಲೆ ಮೇಲಕ್ಕೆತ್ತಿ ನೋಡು.

ಶಕುಂ: (ಮಂದಹಾಸದ ಮೌನ.)

ವಸಂತ: ಹ್ಹಾ ಹ್ಹಾ! ಅದೇ....ಮೌನಂ ಸಮ್ಮತಿಲಕ್ಷಣಂ....ಅಂತ! ....ನೋಡು ಸ್ಕೂಲ್ ಬಿಟ್ಟಮೇಲೆ....ಹಾಗೇ ಒಂದೆರಡು ಕವರು ತಗೋಣಾಂತ ಪೋಸ್ಟ್ ಆಫೀಸಿಗೆ ಹೋಗಿದ್ದು ಬಂದೆ........ಅದಕ್ಕೇ ಸ್ವಲ್ಪ....ತಡ....

ಶಕುಂ: ಇವತ್ತೇ ಅದಕ್ಕೇನಂತೆ ಅಷ್ಟು ಆತುರ?....

ವಸಂತ: ಆತುರವಲ್ಲದೆ ಮತ್ತೆ?....ಬೆಳಗ್ಗೆ ಡಾಕ್ಟ್ರು ಹೇಳಿದಲ್ಲಿಂದಲೂ ನನಗೆ ನಿನ್ನ ತಲೆನೋವಿಗೆ....ಔಷಧಿಯಲ್ಲ ಬೇಕಾದ್ದು; ಕಾಗದ ಅಂತ ಗೊತ್ತಾಯ್ತು....

ಶಕುಂ: ಕಾಗದ ತಿನ್ಬೇಕಾಗಿತ್ತೇನೋ?....

ವಸಂತ: ಊಹುಂ....ಅದರಲ್ಲಿ ವಿವರವಾಗಿ....ನಿನ್ನ ತಲೆನೋವಿನ ವಿಚಾರ, ಜೊತೆಗೆ....ವಾಂತಿ-ವಮನಗಳನ್ನೂ ಬರೆದು ನಮ್ಮೂರಿಗೊಂದು ....ನಿಮ್ಮೂರಿಗೊಂದು ಇವತ್ತೇ ಕಳಿಸ್ಬೇಕಿತ್ತು....ಅಷ್ಟೆ....

ಶಕುಂ: (ಕೈಹಿಡಿದುಕೊಂಡು ಬೇಡುವ ಧ್ವನಿಯಲ್ಲಿ) ನೋಡಿ ನಿಮ್ಮ ದಮ್ಮಯ್ಯ....ನಿಮ್ಮ ಕಾಲಿಗೆ ಬಿದ್ದು ಬೇಡಿಕೊಳ್ಳುತ್ತೇನೆ....ಈಗಲೇ ಅದು ಹಾಗೆ, ಇದು ಹೀಗೆ....ಅಂತ ಪುರಾಣ ಬರೀಬೇಡಿ___.ಮಾನ ಹೋಯಿತ್ತೆ....

ವಸಂತ: (ಹಟಹಿಡಿದು) ಉಹುಹುಂ....ಕಾಗದ ತಂದ ಮೇಲೆ ಬರೆಯುದೇ ಇದ್ದರೆ ಆಗುತ್ತೆಯೆ? ಈಗ ಅ ಅ....(ಆಲೋಚಿಸುತ್ತ)ಏನೂಂತ ಬರೆಯೋದು?...ಸರಿ! ಹೇಳು....ನೀನೇ ಹೇಳು....ಹಾಗೇ ಬರೆಯುತ್ತೇನೆ.

ಶಕುಂ: ಏನಾದ್ರೂ ಬರೀರಿ....ನನ್ನ ಕೇಳ್ಲೂ ಬೇಡಿ....ನಾ ಹೇಳೋದೂ ಇಲ್ಲ___(ಬಿಗುಮಾನ).

ವಸಂತ: ನಾನಾದ್ರೂ ಬರೆಯುತ್ತೇನೆ....ಹುಂ.... ಮಾವನವರಲ್ಲಿ ನಿಮ್ಮಳಿಯ ವಸಂತನ ಬಿನ್ನಹಗಳು....ಕ್ಷೇಮ....ವಿಶೇಷವೇನೂ ಇಲ್ಲ....ಸದ್ಯಕ್ಕೆ ನಿನ್ನೆಯಿಂದ ಕೊಂಚ ತಲೆಸಿಡಿತ; ಜೊತೆಗೆ ವಾಂತೀನೂ ಇದೆ....ಅಂತ ಡಾಕ್ಟರ ಔಷಧಿ ತಂದಿದೆ....ಈಗ ವಾಸಿಯಾಗಿದೆ. ಡಾಕ್ಟ್ರು "ಇನ್ನೊಂಬತ್ತು

ತಿಂಗಳಿಗೆ...ತಿಂಗಳಿಗೆ ನಿಮ್ಮ ಮಾವ ಅಜ್ಜನಾಗುತ್ತಾರೇಂತ ಹೇಳಿದ್ದಾರೆ” ....ಛ್ಛ, ಛೇ, ಸಕ್ಕ್ಯಾ! ಅಥವಾ ಈ ವಾಕ್ಯವನ್ನ ಹೀಗೆ ಬದಲಾಯಿಸಿದರೇನು?—“ನಿಮಗೆ ಮೊಮ್ಮಗ ಹುಟ್ಟಲಿದ್ದಾನೆ” ಅಂತ ವಾಚ್ಯವಾಗಿಯೇ ಬರೆದರೇನೊಂತ?....

ಶಕುಂ: ಮಗನೋ ಮಗಳೋ ಅಂತ ನಿಮಗೇನು ಗೊತ್ತಾಂದ್ರೆ?...

ವಸಂತ: ಖಂಡಿತಾ ಗೊತ್ತಾನ್ನು...(ಅಭಿಪ್ರಾಯ ಬದಲಿಸುತ್ತಂತೆ) ಆದರೂ ಮೊದಲಿನ ವಾಕ್ಯವೇ ಸರಿ....ಒಂದು ವೇಳೆ ಮಗನಾದರೂ ಮಗಳಾದರೂ—“ಅಜ್ಜನಾಗುತ್ತೀರಿ” ಎಂದರೆ ಎರಡಕ್ಕೂ ಸರಿಹೋಗುತ್ತೆಯಲ್ಲಾ? ಅದೇ ಒಳ್ಳೆಯದು.

ಶಕುಂ: ನನ್ ಕೇಳಿದ್ರೆ...ಸದ್ಯ ಏನೂ ಬರೀಬೇಡೀಂತ....

ವಸಂತ: ನಿನ್ನ ಇನ್ನ್ಯಾರು ಕೇಳುತ್ತಾರೆ? ಆಗಲೇ ನೀ ಅಂದು ಬಿಟ್ಟೆಯಲ್ಲಾ....ನನ್ನ ಕೇಳ್ಲೂ ಬೇಡ...ನಾ ಹೇಳೋದೂ ಇಲ್ಲ ಅಂತ.

ಶಕುಂ: ಎಲ್ಲೆಲ್ಲಿದ್ದೋ ಮೂಲೆಪುರಾಣ ಬಿಚ್ಚಿಕೊಂಡ್ರಿ....ಅದೋ ಆ ಕಾಫಿ ಆರಿ ತಣ್ಣೀರಾಗೋಯ್ತು. ಸ್ಟವ್ ಹಚ್ಚಿ ಬಿಸಿಮಾಡ್ತೀನಿ.... (ಏಳುವಳು).

ವಸಂತ: (ತಡೆದು) ಬೇಡಬೇಡ.....ಇರಲಿ, ಪರವಾಯಿಲ್ಲ....ಹಾಗೇ ಕೊಡು....ತಣ್ಣಗಿದ್ರೆ ಇನ್ನೂ ಸಲೀಸು...,ನೀನೂ ಅಷ್ಟೆ. ನಾ ಹೇಳೋದಾದ್ರೆ ಈ ಕಾಫಿಗಿನ್ನ—ನೀನು ಗಟ್ಟಿ ಹಾಲು ಕುಡಿದರೆ ಚೆನ್ನ....(ಕುಡಿಯುತ್ತ)....ಹಾಗೆ ನೋಡಿದ್ರೆ....ಬಿಸಿ ಕಾಫಿಗಿಂತ ಆರಿದ ಕಾಫಿಯೇ ಸರಿಯೆಂದು ನನಗೆ ತೋರುತ್ತದೆ. ಏಕೆಂದರೆ ಬಿಸಿಯ ಭರಾಟೆಯಲ್ಲಿ ಕಾಫಿಯ ಯಾವ ಸ್ವಾರಸ್ಯವೂ ತಿಳಿಯುವ ಹಾಗಿಲ್ಲ. ಈ ತರ ಆರಿದ್ರೆ... ಆಹ! ಕಾಫಿಯಲ್ಲಿ ಇರುವ ಸೂಕ್ಷ್ಮವಾದ ಆಸ್ವಾದ, ವಾಸನೆ ಎಲ್ಲವನ್ನೂ ಸವಿಯಲು ಅವಕಾಶ ಧಾರಾಳವಾಗಿ ಸಿಗುತ್ತದೆ—ಬಿಸಿ ಹೆಚ್ಚಾಗಿದ್ದರೆ ತುಟಿಯಲ್ಲಿ ಹೀರುವುದಕ್ಕೆ ಮುನ್ನವೇ ಹೊಟ್ಟೆಗಿಳಿಸಬೇಕಲ್ಲೊ? ಆಗ ಸ್ವಾರಸ್ಯವೆಲ್ಲಿ ಬಂತು?

ಶಕುಂ: ಅಯ್ಯೋ ಹಣೆಬರವೇ! ಆಗಲೇ ನೀವು ಆರಿದ ಕಾಫಿಯ ಸ್ವಾರಸ್ಯ ಎಂಬ ವಿಷಯದ ಮೇಲೆ ಭಾಷಣಕ್ಕೆ ಎರಗಿದಿರಲ್ಲ? ಈ ಭಾಷಣದ ಚಟ ಮೇಷ್ಟ್ರುಗಳ ಬೆನ್ನುಬಿದ್ದೇ ಇರುತ್ತದೆ—ಎನ್ನೋದು

ವಸಂತ: ಇರಲಿ....ಇನ್ನೊಂದೇ ಒಂದು ಉಪಸಂಹಾರ ವಾಕ್ಯ ಮಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ....ಮಹನೀಯರೆ! ಮತ್ತು ಮಹಿಳೆಯರೆ! ಇದರಿಂದ ನಾನು ಚಿಕೋರಿ ಮಿಶ್ರಣ ಇರದ ಕಾಫಿಯೇ ಮೇಲೆಂದು ಅಭಿಪ್ರಾಯಪಡುತ್ತೇನೆ – ಜೈ ಕರ್ನಾಟಕ!

ಶಕುಂ: (ಕೈಚಪ್ಪಾಳೆ ತಟ್ಟಿ) ಹಹ್ಹಹ್ಹ!

ವಸಂತ: ಹಹ್ಹಹ್ಹ! (ಇಬ್ಬರೂ ನಗುವರು).

ಶಕುಂ: (ನಗು ನಿಲ್ಲಿಸಿ, ಗಂಭೀರವಾಗಿ)ಅಲ್ಲಾಂದ್ರೆ....ಈವತ್ತೊಂದು ಸಿನಿಮಾ ನೋಡ್ಕೊಂಡು ಬರೋಣ, ಆಗದೇ?....ಆಗಲೇ ನೆರೆಮನೆ ಶಾಂತಲಾಗೂ ಹೇಳಿದ್ದೆ—ಹೋಗ್ತಿವಿ ಅಂತ.

ವಸಂತ: ಆಗಲಿ, ಆಗಲಿ. ಇದೂ ಒಂದು ಹೊಸತರದ ಬಯಕೆನೇ ಇರಬಹುದೇನೋ? ಹಿಂದಿನ ಕಾಲದ ಕಾವ್ಯಗಳಲ್ಲಿ—ಗರ್ಭಿಣಿಯರು ಏನೇನೋ ಹಣ್ಣು ಹಂಪಲು—ತಿಂಡಿ ತಿನ್ನೋಕೆ ಬಯಸುತ್ತಾ ಇದ್ದರೂಂತ ವರ್ಣನೆ ಮಾಡಿದೆ....ಈಗಿನ ಕಾಲದ ಹೆಂಗುಸರಿಗೆ ಸಿನಿಮಾ ನೋಡ್ಬೇಕು ಅನಿಸಿದರೆ ಹೆಚ್ಚೇನೂ ಅಲ್ಲ. ಹೂಂ.... ಸಕ್ಕು! ಇನ್ನೊಂಬತ್ತು ತಿಂಗಳು ನೀ ಕೇಳಿದ್ದೆಲ್ಲಾ ತಂದುಕೊಡುತ್ತೇನೆ, ನನ್ನರಸಿ!

ಶಕುಂ: ಎನ್ನರಸ! ಚೆನ್ನರಸ! ಏಳಿ, ಮತ್ತೆ; ಏಳಿ.... ಹೊತ್ತಾಗುತ್ತೆ....

ವಸಂತ: ಓಹೋಹೋ ಪರವಾಯಿಲ್ವೆ! ಮದುವೇ ದಿನ ನಾಚು ನಾಚುತ್ತಾ ಆಡಿದ ಮಾತನ್ನೆಲ್ಲಾ ಇಂದು ನಿರಾಳವಾಗಿಯೇ ಹೇಳ್ತಾ ಇದ್ದೀಯಲ್ಲ? ಆಗಲಿ....(ತನ್ನ ಕ್ರಾಪನ್ನು ಕೈಯಿಂದ ಸವರುತ್ತ, ಸಿದ್ಧನಾಗಿ) ಹೂಂ....ನೀನೂ ಬೇಗನೆ ಹೊರಟುಬಿಡು.

ಶಕುಂ: ಇದೋ ಬಂದೆ....(ಎನ್ನುತ್ತಾ ಒಳಗಡೆಗೆ ಲಗುಬಗೆಯಿಂದ ನಡೆಯುವಳು. (ತೆರೆ).

ದೃಶ್ಯ ೩

(ಶ್ಯಾಮಲೆಯು ಮಗನನ್ನು ತೊಟ್ಟಿಲಲ್ಲಿ ಮಲಗಿಸಿ ತೂಗುತ್ತಿರುವಳು. ಅದಕ್ಕನುಸರಿಸಿ ನಿಧಾನ ಶ್ರುತಿ)

ಶ್ಯಾಮಲೆ: (ಮಗುವನ್ನೆತ್ತಿ ಮುದ್ದಾಡುತ್ತ) ಕಂದಾ! ಓ ನನ್ನ

ರಾಜಾ....ಮಲಕ್ಕೊಳ್ಳಣ್ಣ!....ನಿದ್ದೆಮಾಡು ಮುದ್ದು!....ಜೋ....ಜೋ (ಮತ್ತೆ ಮಲಗಿಸಿ ತೂಗುವಳು).

ಜೋಗುಳ ॥ ಜೋಜೋ ಹಟಮಾಡದಿರು ಮುದ್ದು ಕಂದ!
ಜೋಜೋ ನೀನಾಡು ಕಂದ । ಚಕ್ಕಂದ ॥
ಕೆನೆಹಾಲು, ಹನಿಜೇನು ಸಕ್ಕರೆ ಬೆರಸಿ
ನಿನಗಿತ್ತು ಮಲಗಿಸುವೆ ತೊಟ್ಟಿಲಿಗೆ ಹಾಕಿ ॥
ತಂಗಾಳಿ ತೂಗುವುದು ನಿನ್ನೀ ಉಯ್ಯಾಲೆ!
ಹೊಂಗನಸು ಕಾಣಿಸಲಿ ನಿದ್ರಿಸಿದ ವೇಳೆ ॥
ಬಾಳಿನ ಬೆಳಕಾಗು ಮಲಗೆನ್ನ ರನ್ನ!
ನಾಳೆ ನಾಡಿನ ನುಡಿಯ ಕಾಯೋ ಸಂಪನ್ನ! ॥
ಕನ್ನಡಾಂಬೆಯ ಕರುಣೆ ನಿನ್ನ ಮೇಲಿರಲಿ!
ಕನ್ನಡಾಂಬೆಯ ರಕ್ಷೆ ನಿನ್ನ ಮೇಲಿರಲಿ ॥ ಜೋಜೋ....

(ಕ್ರಮಕ್ರಮವಾಗಿ ಜೋಗುಳದಾಟಿಯ ಅವರೋಹಣ)

ಶಾಂತಲೆ: (ಪ್ರವೇಶಿಸಿ ಮೆಲುದನಿಯಲ್ಲಿ) ಏನೇ ಶ್ಯಾಮಲಾ! ಮಗುವನ್ನು ಮಲಗಿಸುತ್ತಿದ್ದೀಯಾ?

ಶ್ಯಾಮಲೆ: (ಮೆಲುಸ್ವರದಲ್ಲಿ) ಓಹೋ! ಶಾಂತಲೆಯೇನು! ಹೂಂ ....ಇದೋ [illegible] ವರೆಗೂ ಅದು ಇದೂಂತ ಕೆಲಸವಿದ್ದೇ ಇತ್ತು. ಇದೇ ತಾನೇ ಮಗನಿಗೆ ಹಾಲುಕುಡಿಸಿ ಮಲಗಿಸಿದೆ....ಹಾಗೇ ಸ್ವಲ್ಪ ಈ ಕಡೆಗೆ ಬಾ, ಕುಳಿತುಕೋ ...ಒಂದು ಲೋಟಾ ಬೇಲದ ಹಣ್ಣಿನ ಶರಬತ್ತು ತಗೋ ....ಬಂದೆ (ಒಳಗೆ ಹೋಗುವಳು).

ಶಾಂತಲೆ: (ಕುಳಿತುಕೊಳ್ಳುವಳು).

ಶ್ಯಾಮಲೆ: (ಪ್ರವೇಶಿಸಿ, ಶರಬತ್ತು ಕೊಟ್ಟು) ನಿಮ್ಮ ಯಜಮಾನರು ಇನ್ನೂ ಆಫೀಸಿನಿಂದ ಬಂದಿಲ್ಲಾಂತ ಕಾಣುತ್ತಲ್ಲಾ....ಶಾಂತಾ?

ಶಾಂತಲೆ: ಈದಿನ ಅವರ ಆಫೀಸ್ ಇನ್ಸ್ಪೆಕ್ಷನ್ ಅಂತೆ. ಅದಕ್ಕೇ ಬರುವುದು ಕೊಂಚ ಲೇಟಾಗುತ್ತೆ ಅಂದಿದ್ರು.

ಶ್ಯಾಮಲೆ: ಹೂಂ. ಸರಿಹೋಯಿತು....ನಮ್ಮವರಿಗೂ ಇವತ್ತು ಯಾವುದೋ ಊರೊಳಗೆ ಫೀಲ್ಡ್ ಸರ್ವೇ ಅಂತೆ....ಅಂತೂ ಇಬ್ಬರಿಗೂ

ತಗಲಿಹಾಕ್ಕೊಂಡಿದೆ. ಏನಗೂ ಅಷ್ಟೊತ್ತಿನಿಂದ ಬಿಡುವೇ ಇಲ್ಲ. ಹಾಗೇ ಒವೆಸ್ಸ್ಶ ಶಕುಂತಲಾನ ನೋಡಿ ಮಾತಾಡಿಸ್ಕೊಂಡು ಬರ್ಬೇಕೂಂತಿದ್ದೆ.... ಆಗಲೇ ಇಲ್ಲ ನೋಡು....ಪಾಪ! ನಿನ್ನೆ ತಲೆನೋಯುತ್ತೆ ಅಂತಿದ್ಳು!

ಶಾಂತಲೆ: ನಿಜಾ, ಕಣೇ ಶಾಮೂ! ಈವತ್ತು ಬೆಳಗ್ಗೆ ನಾನೇ ಅವಳ ಮನೆಗ್ಹೋಗಿದ್ದೆ....ಏನಾದ್ರೂ ಕತೇಪುಸ್ತಕ ತರೋಣಾ ಅಂತ. ಏಕೆಂದರೆ ಅವರ ಯಜಮಾನ್ರು ಯಾವಾಗಲೂ ಸ್ಕೂಲಿಂದ ಹೆಚ್ಚಾಗಿ ಪುಸ್ತಕ ತರುತ್ತಿರುತ್ತಾರೆ.....ಹಾಗೇ ಹೋದ್ರೆ.... ಸಕ್ಕೂ ತುಂಬಾ ಕಂಗೆಟ್ಟದ್ದ ಹಾಗೆ ಕಾಣಿಸ್ತು....ನಾನೂ ಗಾಬರಿಯಾದೆ.... ಬೆಳಗ್ಗೆ ಡಾಕ್ಟ್ರಲ್ಲಿಂದ ಮದ್ದೂ ತಂದರಂತೆ!

ಶ್ಯಾಮಲೆ: (ಗಾಬರಿಯಾದಂತೆ) ಈಗ ಹೇಗಿದ್ದಾಳೆ, ಹೇಳು! (ಬೇಸರಗೊಂಡಂತೆ) ನನ್ನ....ಬರ್ಲಿಲ್ಲಾಂತ ಬೈಕೋತಾ ಇದಾಳೋ ಏನೊ!

ಶಾಂತಲೆ: ಇಲ್ಲ, ಇಲ್ಲ, ಸದ್ಯಕ್ಕೆ ವಾಸಿಯಾಗುತ್ತಿದೇ ಅನ್ನು.... ಇವತ್ತು ಸಿನಿಮಾಕ್ಕೂ ಹೊರಟಿದ್ದಾರೆ.... ಇಬ್ಬರೂ.

ಶ್ಯಾಮಲೆ: (ಸಂತೋಷದಿಂದ) ಹಾಗೇನು? ಪರವಾಯಿಲ್ಲ.... ಈ ಹವೇ ವ್ಯತ್ಯಾಸಕ್ಕೆ!

ಶಾಂತಲೆ: (ಕೊಂಕುನುಡಿಯಲ್ಲಿ) ಅಯ್ಯೋ, ಹುಚ್ಚಿ.... ಹವೆ ವ್ಯತ್ಯಾಸ ವೇನು ಅವಳೊಬ್ಬಳಿಗೇ? ಏನೆ?.... ನಮಗೇಕೆ ತಲೆನೋಯೊಲ್ಲ? ..(ತಡೆದು) ಅವಳಿಗೇ.... ಜೊತೆಗೆ ವಾಂತೀನೂ ಇದೆಯಂತೆ। ನಿಂಗೊತ್ತಿಲ್ವೆ? ಅವಳೇ ಅಂದ್ಳು!

ಶ್ಯಾಮಲೆ: ವಾಂತೀನೂ ಇದೆಯೆ? (ನಗುತ್ತ) ಸರಿ, ಮತ್ತೆ.... ಹಾಗಾದ್ರೆ....(ನಗುತ್ತಿರುವಾಗಲೇ)

ಶಾಂತಲೆ: ಹೂಂ, ನಮಗೆಲ್ಲಾ ಕೊಬ್ರಿ ಸಕ್ರೆ ಸಿಗಲಿಕ್ಕಿದೇ ಅನ್ನು....(ನಗು).

(ಇಬ್ಬರೂ ಕಿಲಕಿಲನೆ ನಗುವರು).

ಶ್ಯಾಮಲೆ: (ನಗು ನುಂಗಿಕೊಳ್ಳುತ್ತ) ಅಲ್ಲಕ್ಕ ಕಣೇ ಶಾಂತಾ.... ಅಂದ್ಹಾಗೆಕ್ಕ....ನಿನಗೂ ಏನಾದ್ರೂ.... ತಲೆಗಿಲೆ?....?

ಶಾಂತಲೆ: ಊಹುಂ.... ಸದ್ಯ ನನಗೇನು?.... ನಮ್ಮ ಮನೇ ಹತ್ರಕ್ಕೆ ತಲೆನೋವು ಬರುವ ಹಾಗೇ ಇಲ್ಲ. ಏಕೆಂದರೆ ನಾವು ದಿನಾಲೂ ಬೆಳಗಾದರೆ ಸರಿ—ಮೊತ್ತಮೊದಲು ತಲೆನೋವಿನ ಮಾತ್ರೆಯು ಕಂಪೆನಿಯವರು ಮುದ್ರಿಸಿದ ಕ್ಯಾಲೆಂಡರನ್ನೇ ನೋಡುತ್ತೇವೆ. ಅದಕ್ಕೇ......

ಶ್ಯಾಮಲೆ: ಅದೆಲ್ಲಾ ಪುಸ್ತಕದ ಬದನೇಕಾಯಿ. ಇನ್ನು ನಿನ್ನೊಬ್ಬಳನ್ನು ನೋಡ್ಬೇಕಾದ್ದಿದೆಯೇನು? ಈ ವರೆಗೆ ಎಷ್ಟು ಜನ ಹೀಗೆಂದವರೇ ಮತ್ತೆ ತಲೆ ನೋಯಿಸಿಕೊಂಡಿದ್ದಾರೋ ಏನೋ! ಇನ್ನೂ ಎಷ್ಟು ಜನಣ ಅದಕ್ಕೆ ಕಾದಿದ್ದಾರೋ! ಯಾವ ಹೆಂಗುಸಿಗೂ ಈ ತಲೆನೋವಿನ ವಾಂತಿಣ ತಪ್ಪಿದ್ದಲ್ಲ; ಅಂಥದರಲ್ಲಿ ನೀನೇನು ಮಹಾ?

ಶಾಂತಲೆ: ಹೋಗಲಿ, ಬಿಡು.

ಶ್ಯಾಮಲೆ: ಹೂಂ, ಹೋಗಲಿ ಬಿಡು. ನಿಂಗೆ ಬೇಡದ್ದು ನಂಗ್ಯಾಕಂತೆ! ಹ್ಞಾ, ನಾಳೆ ನೀನೂನೂ ಸ್ವಲ್ಪ.... ಆದಷ್ಟು ಬೇಗನೆ ಬಂದರೆ ನಾವಿಬ್ಬರೂ ಒಂದು ನಿಮಿಷ ಸಕ್ಕೂನ ನೋಡಿಕೊಂಡು ಬರೋಣ. ಬರ್ತೀಯಾ, ಶಾಂತಾ?

ಶಾಂತಲೆ: ಶಾಮೀ! ಖಂಡಿತಾ ಬರ್ತೀನಿ. ಜೊತೆಯಲ್ಲೇ ಹೋಗೋಣ. ನಾನೀಗ ಹೊರಡ್ತೇನೆ....(ಗಾಬರಿಯಾಗಿ) ಅದೋ! ಸಂಜೆಯಾಗುತ್ತಾ ಬಂತು. ಮನೆಯಲ್ಲಿ ದೀಪಹಚ್ಚಬೇಕು. (ಹೊರಡುವಳು).

ಶ್ಯಾಮಲೆ: ಹೂಂ. ಆಗಲಮ್ಮಾ..ನಾಳೆ? ?

ಶಾಂತಲೆ: ನಾಳೆ ಖಂಡಿತಾ ಬರ್ತೀನೀಣಿ (ಹೋಗುವಳು).

ಶ್ಯಾಮಲೆ: (ಭಾವಪರವಶಳಾಗಿ, ಅಸ್ಪಷ್ಟಧ್ವನಿಯಲ್ಲಿ ಜೋಗುಳದ ಪಲ್ಲವಿಯನ್ನು ಆವರ್ತಿಸುತ್ತಾ ತೊಟ್ಟಿಲ ಬಳಿಗೆ ಸಾಗುವಳು.)

(ತೆರೆ)

ಸಂಪೂರ್ಣ

[ಹೊದಿಕೆಯ 2ನೇ ಪುಟದಿಂದ ಮುಂದುವರಿದುದು.]

54 ನಚಿಕೇತ
55 ದಲಿತೋದ್ಧಾರ
56 ಸುಧನ್ವ
57 ದಳವಾಯಿ ಮುದ್ದಣ್ಣ
58 ತ್ಯಾಗ ಶಿರೋಮಣಿ ಜೀಮೂತವಾಹನ
59 ಶ್ರೀರಾಮ ರಾಜ್ಯಾಭಿಷೇಕ
60 ವಿಭೀಷಣ ಶರಣಾಗತಿ
61 ಅಂಗದನ ರಾಯಭಾರ
62 ಮೂರು ಕಿರುನಾಟಕಗಳು
63 ಇಚ್ಛಾಮರಣಿ
64 ಭಕ್ತ ಮಾರ್ಕಂಡೇಯ
65 ವೀರ ಮಕರಾಕ್ಷ
66 ರಣಮಲ್ಲ ವಿಜಯ
67 ಚಂಡಿ
68 ಧರ್ಮಸ್ಥಾಪನೆ
69 ಇದ್ದವರು ಮೂವರು
70 ಬೆಟ್ಟಯ್ಯನ ಗುಡಿಗೆ
71 ತಿಲೋತ್ತಮೆ
72 ಜೀಮೂತವಾಹನ
7 ಶುಭಶಕುನ
74 ನವಜೀವನ
75 ಮರೆವೂ ಮರೆವು
76 ಶ್ರೀಗಂತ ಧೀ ಮೇಲು
77 ವೀರ ಜಟಾಯು
78 ರಾಣಿ ಅಬ್ಬಕ್ಕ
79 ಏಕದಂತ
80 ಸತಿ ಅನಸೂಯ
81 ಭಕ್ತ ಶಬರ
82 ಮಹಿಷಾಸುರ ವಧೆ
83 ಮಹಾಭಿನಿಷ್ಕ್ರಮಣ ಭಾಗ ೧
84 ,, ಭಾಗ ೨
85 ಅಹಲ್ಯಾ ಶಾಪ
86 ಶ್ರೀ ರಾಮಾನುಗ್ರಹ
87 ಕಾಳಿದಾಸ
88 ಕೀಚಕ
89 ಭೀಷ್ಮ–ಅಂಬೆ
90 ಶ್ರೀಮತಿಯ ಪರಿಣಯ
91 ಎಲ್ಲಿಪ್ರೇಮವೋಅಲ್ಲಿದೇವರು
92 ಮಧ್ಯಮ ವ್ಯಾಯೋಗ
93 ಅಗ್ನಿಪರೀಕ್ಷೆ
94 ಸತ್ಕಾರ
95 ಆದರ್ಶ ವಿದ್ಯಾರ್ಥಿ
96 ಉತ್ತರ ಕುಮಾರ
97 ವರ್ಧಂತಿಯ ಸಡಗರ
98 ಶಿಕ್ಷಣ ಪರೀಕ್ಷೆ
99 ಹಣಿ
100 ಸುಂದೋಪಸುಂದ
101 ಅಲೆಕ್ಸಾಂಡರ್

'ಒಂದಾಣೆ ಮಾಲೆ'ಯಲ್ಲಿ, ಪ್ರಕಟವಾದ ಒಟ್ಟು 336 ಪುಸ್ತಕಗಳಲ್ಲಿ 101 ಏಕಾಂಕ ನಾಟಕಗಳೇ ಇವೆ.

ನಿಮ್ಮ ಸಮೀಪದ ನ್ಯೂಸ್ ಏಜಂಟರಲ್ಲಾಗಲೀ ಪುಸ್ತಕ ವ್ಯಾಪಾರಿಗಳಲ್ಲಾಗಲೀ ವಿಚಾರಿಸಿರಿ. ಅಥವಾ

ಒಂದಾಣೆ ಮಾಲೆ, ಪ್ರಭಾತ ಆಫೀಸು,
ರಥಬೀದಿ, ಮಂಗಳೂರು—೧.

ಪ್ರತಿ ವಾರವೂ ಕೊಂಡುಕೊಳ್ಳಿರಿ!

“ಒಂದಾಣೆ ಮಾಲೆ”ಯ ಪುಸ್ತಕಗಳು, ಪ್ರತಿ ವಾರ ಪ್ರಕಟವಾಗುತ್ತಿವೆ. ಹೊಸ ಹೊಸ ವಿಷಯಗಳ ಮೇಲೆ ಪುಸ್ತಕಗಳು ಹೊರಡುತ್ತಿವೆ. 1954 ನೇ ಸಪ್ಟಂಬರದಿಂದ 1962 ನೇ ಫೆಬ್ರವರಿ ತಿಂಗಳ ವರೆಗೆ 338 ಪುಸ್ತಕಗಳು ಪ್ರಕಟವಾಗಿವೆ.

338 ಆಣೆಗಳಿಗೆ ‘ಒಂದಾಣೆ ಮಾಲೆ’ಯು, ಹೊದಿಕೆ ಕೂಡಿ, ಒಟ್ಟು 1734 ಪುಟಗಳನ್ನು ಕೊಟ್ಟಿರುತ್ತದೆ. ಇಷ್ಟು ಮೊಬಲಗಿಗೆ ಇಷ್ಟು ಪುಟಗಳನ್ನು ಬೇರೆ ಎಲ್ಲಿಯೂ ಯಾವ ಪ್ರಕಟಣೆಯೂ ಕೊಟ್ಟಿಲ್ಲ.

ವಿದ್ವಾಂಸರು ಮಾತ್ರ ‘ಒಂದಾಣೆ ಮಾಲೆ’ಗೆ ಬರೆಯುತ್ತಾರೆ. ‘ಅಶ್ಲೀಲ’ ಎಂಬ ಅಂಶವೇ ‘ಒಂದಾಣೆ ಮಾಲೆ’ಯ ಪ್ರಕಟಣೆಗಳಲ್ಲಿರುವುದಿಲ್ಲ.

‘ಒಂದಾಣೆ ಮಾಲೆ’ ಪುಸ್ತಕಗಳು ಚಿಕ್ಕ ವಿದ್ಯಾರ್ಥಿಗಳಿಂದ ವಯೋವೃದ್ಧರ ವರೆಗೆ, ಪ್ರತಿಯೊಬ್ಬನಿಗೂ ಅವಶ್ಯ ಇವೆ. ಇಷ್ಟು ಸುಲಭ ಬೆಲೆಯಲ್ಲಿ ಇಷ್ಟು ಉತ್ತಮ ಸಾಹಿತ್ಯವು, ಈ ಮೊದಲು ಎಲ್ಲಿಯೂ ಒದಗಿಸಲ್ಪಟ್ಟಿಲ್ಲ.

‘ಒಂದಾಣೆ ಮಾಲೆ’ ಪುಸ್ತಕಗಳನ್ನು ಟಪ್ಪಾಲು ದ್ವಾರಾ ತರಿಸಿಕೊಳ್ಳುವವರು ರೂ. 4—8—0ನ್ನು ಮನಿಯಾರ್ಡರ್ ಮೂಲಕ ಕಳಿಸತಕ್ಕದ್ದು. ಡಿಪಾಜಿಟ್ ಇಡುವವರು ಮಾತ್ರ ಏಜನ್ಸಿಗಾಗಿ ಬರೆದುಕೊಳ್ಳತಕ್ಕದ್ದು.

ವಾರಕ್ಕೆ ಕೇವಲ ಒಂದಾಣೆ ವ್ಯಯದಿಂದ ಒಂದು ಉತ್ಕೃಷ್ಟ—ಉಪಯುಕ್ತ ಪುಸ್ತಕವನ್ನು ಹೊಂದುವ ಈ ಯೋಜನೆಯ ಸದುಪಯೋಗ ಮಾಡಿಕೊಳ್ಳಿರಿ.

ಒಂದಾಣೆ ಮಾಲೆ, ಪ್ರಭಾತ ಆಫೀಸು, ರಥಬೀದಿ,
ಮಂಗಳೂರು-1.

ANNA PUBLICATIONS, CAR STREET, MANGALORE-1.

Edited, Printed & Published by K. V. Shenoy
at The Prabhat Printers Ltd., Mangalore.